
## ಹಿಂದಿದೆ...

ಕುತುಬ್ ಮಿನಾರ್ ನೋಡಲು ಮೇಲೆ ಹತ್ತಿದ್ದ ಗುಂಡ. ಮೇಲಿಂದ ಕೆಳಗೆ ನೋಡುವಾಗ ಅವನ ಕೈಯಿಂದ ಬೆಲೆಬಾಳುವ ವಾಚು ಜಾರಿ ಕೆಳಗೆ ಬಿತ್ತು. ಗಡಿಬಿಡಿಯಿಂದ ಮೆಟ್ಟಿಲಿಳಿದು ಕೆಳಗೆ ಓಡಲಾರಂಭಿಸಿದ. ಮತ್ತೊಬ್ಬ ಪ್ರವಾಸಿ, 'ಏನಾಯ್ತು?' ಎಂದು ಪ್ರಶ್ನಿಸಿದ. ಗುಂಡ 'ನನ್ನ ವಾಚು ಕೆಳಗೆ ಬಿದ್ದಿದೆ. ಅದನ್ನು ಹಿಡಿಯಬೇಕು' ಎಂದ. ಇನ್ನೊಬ್ಬ ಪ್ರವಾಸಿ, 'ಅದು ಈಗಾಗಲೇ ಕೆಳಗೆ ಬಿದ್ದು ಒಡೆದು ಹೋಗಿರುತ್ತದೆ' ಎಂದ. ತಕ್ಷಣ ಗುಂಡ, 'ಸಾಧ್ಯವೇ ಇಲ್ಲ, ಅದು ಐದು ನಿಮಿಷ ಹಿಂದಿದೆ' ಎಂದ.

**ಶರತ್‌ಕುಮಾರ್ ತೋನ್ಸೆ**





## ಆಫರ್

ಮ್ಯಾರೇಜ್ ಬ್ರೋಕರ್ ವರನಿಗೆ ವಧುಗಳ ಪರಿಚಯ ಮಾಡಿಸುತ್ತಿದ್ದ – 'ನೋಡಿ ಇವಳು ಮೂರನೇ ಮಗಳು, ವಯಸ್ಸು 23, ₹1 ಲಕ್ಷ ವರದಕ್ಷಿಣೆ. ಇವಳು ಎರಡನೇ ಮಗಳು, ವಯಸ್ಸು 26, ₹2 ಲಕ್ಷ ವರದಕ್ಷಿಣೆ. ಅಗೋ ಅಲ್ಲಿ ಸೋಫಾದ ಹಿಂದೆ ನಿಂತಿರುವವಳು ಹಿರಿ ಮಗಳು, ವಯಸ್ಸು 29, ವರದಕ್ಷಿಣೆ ₹4 ಲಕ್ಷ...' ವರ ಕೇಳಿದ, 'ಅಲ್ಲಿ ಬಾಗಿಲ ಹತ್ತಿರ ನಿಂತಿದ್ದಾಳಲ್ಲ, ಅವಳನ್ನು ಮದುವೆಯಾದ್ರೆ ₹6 ಲಕ್ಷ ಕೊಡ್ತಾರಾ ಕೇಳಿ.' ಬ್ರೋಕರ್ ತಬ್ಬಿಬ್ಬಾದ. 'ಅಲ್ಲಿ ನಿಂತಿದ್ದು ಈ ಮೂರೂ ಜನ ಹೆಣ್ಣುಮಕ್ಕಳ ತಾಯಿ ಕಣಯ್ಯ...'

**ಕೆ. ಶ್ರೀನಿವಾಸರಾವ್**

ಚಿತ್ರಗಳು: ಗಣೇಶ ಆಚಾರ್ಯ